ನಡೆಸಿ ಯಶೋದಮ್ಮನ ಬಾಯಿಂದ ನಡೆದಿದ್ದರ ವಿವರಣೆ ಪಡೆದಿದ್ದರು. 'ಮನೆಯಲ್ಲಿ ಚಿನ್ನ, ದುಡ್ಡು ಇಟ್ಟುಕೊಳ್ಳುವ ಕಾಲವೇ? ಬ್ಯಾಂಕ್ ಲಾಕರಿನಲ್ಲಿಟ್ಟಿದ್ದರೆ ಹೀಗಿದ್ದೊಂದು ಪರಿಸ್ಥಿತಿ ಬರುತ್ತಿತ್ತಾ? ಇನ್ನು ಜೀವಮಾನ ಇಡೀ ದುಡಿದರೂ ಇಷ್ಟು ಸಂಪಾದನೆ ಮಾಡಲು ಸಾಧ್ಯವಾ? ಖದೀಮರು ಈ ಹೊತ್ತಿಗೆ ಚಿನ್ನ ಕರಗಿಸಿರುತ್ತಾರೆ. ರಾಜ್ಯ ಬಿಟ್ಟು ಪರಾರಿಯಾಗಿರುತ್ತಾರೆ. ಅದರ ಆಸೆ ಬಿಟ್ಟ ಹಾಗೇ ಸೈ...' ತಲೆಗೊಂದೊಂದು ಮಾತು. ಹೌದು, ಮೈಮರೆವಿನ ಕೆಲಸ ಮಾಡಿಕೊಂಡಿದ್ದು ನಿಜ. ಅಲ್ಲಿ, ಇಲ್ಲಿ ಮದುವೆಗೋ, ಮುಂಜಿಗೋ ಹೋಗುವಾಗ ಬ್ಯಾಂಕಿನ ಬಾಗಿಲು ಕಾದು ಬೇಕಾದುದನ್ನು ತೆಗೆದುಕೊಂಡು ಬರಬೇಕು. ಉಪಯೋಗದ ಅನಂತರ ವಾಪಸು ಇಡಲು ಮತ್ತೆ ಹೋಗಬೇಕು. ತನಗೆ ಬೇಕಾದ್ದನ್ನು ಆಯ್ದುಕೊಳ್ಳಲು ಜೊತೆಗೆ ಪಾರಿಜಾತ ಕೂಡಾ ಬರಬೇಕು. ಸೊಸೆ ಉಟ್ಟು ತೊಟ್ಟು ಓಡಾಡಿಕೊಂಡಿದ್ದರೆ ಗೆಲುವಾಗಿ ಕಾಣುತ್ತಾಳೆ ಎನ್ನುವ ಯಶೋದಮ್ಮನ ಬಯಕೆಗೆ ತಕ್ಕಂತೆ ಹಬ್ಬಹರಿದಿನಗಳಲ್ಲೂ ಪಾರಿಜಾತ ಅಷ್ಟಿಷ್ಟಾದರೂ ನಗ ಹಾಕಿಕೊಳ್ಳಬೇಕು. ನಮ್ಮದೇ ಒಡವೆ ವಸ್ತುಗಳು 'ಬೇಕು' ಅನಿಸಿದ ಕೂಡಲೆ ಕೈಗೆ ಸಿಗುವುದಿಲ್ಲ ಎನ್ನುವುದೇ ಒಂದು ರಗಳೆ. ಹೀಗೆ ಮನೆಯಲ್ಲೇ ಸರ್ವಸ್ವವನ್ನೂ ಕಾಪಿಟ್ಟುಕೊಂಡಿದ್ದಕ್ಕೆ ನಾನಾ ಕಾರಣಗಳು. ನಗದಿನ ವಿಚಾರದಲ್ಲೂ ಇಂತಾದ್ದೇ ಬೇಜವಾಬ್ದಾರಿ ಮಾಡಿಕೊಂಡಿದ್ದ ವೆಂಕಟೇಶ. ಬ್ಯಾಂಕಿನಲ್ಲಿ ಅವನ ವ್ಯವಹಾರ ಇಲ್ಲ ಅಂತಲ್ಲ. ಒಂದಷ್ಟು ಹಣ ಅಕೌಂಟಿನಲ್ಲಿ ಇಟ್ಟಿದ್ದಾನೆ. ಅಗತ್ಯಕ್ಕೆ ಇರಲಿ ಎಂದು ದೊಡ್ಡ ಮೊತ್ತ ಮನೆಯಲ್ಲಿಟ್ಟುಕೊಂಡಿರುತ್ತಾನೆ. ಲಕ್ಷದ ಮೇಲಿರಬಹುದು ಎಂದು ಒಂದು ಅಂದಾಜು. ಸರಿಯಾದ ಲೆಕ್ಕ ನೆನಪಿಲ್ಲ. ದಿನಬೆಳಗಾದರೆ ಪೇಟೆಗೆ ತುಕ್ಕುವ ವೆಂಕಟೇಶನಿಗೆ ಎ.ಟಿ. ಎಂ.ನಿಂದ ದುಡ್ಡು ತೆಗೆದುಕೊಂಡು ಬರುವುದೊಂದು ದೊಡ್ಡ ಕೆಲಸವಲ್ಲ. ಅವನದು ಅದೇನೋ ಲೆಕ್ಕಾಚಾರ. ಜೇಬೊಳಗೆ ದುಡ್ಡಿಟ್ಟುಕೊಂಡು ಬಸ್ಸಿನಲ್ಲಿ ಬರುವುದಕ್ಕಿಂತಾ ಮನೆಯೊಳಗಿದ್ದರೆ ಭದ್ರ ಎನ್ನುವ ನಂಬಿಕೆ. ದುಡ್ಡಿಗಿಂತಾ ಕೆ.ಜಿ.ಗಟ್ಟಲೆ ಚಿನ್ನ ಕಳೆದುಕೊಂಡಿದ್ದು ಮನೆಯವರಿಗೆ ದೊಡ್ಡ ಹೊಡೆತ. ಮುಕ್ಕಾಲು ಪಾಲು ಮಾವ ಮಾಡಿಸಿಕೊಟ್ಟಿದ್ದು. 'ನಿನ್ನ ದಡ್ಡತನಕ್ಕೆ ಬೆಂಕಿ ಹಾಕ...' ಎಂದು ಅವರು ಕ್ಯಾಕರಿಸಿ ಉಗಿದರೆ ತಪ್ಪಿರಲಿಲ್ಲ. ಗಂಡಸು, ಮನೆ ಯಜಮಾನ ಅಂದಮೇಲೆ ಇಷ್ಟರಮಟ್ಟಿನ ಲೋಕಜ್ಞಾನ ಬೇಡವಾ? ಒಂದು ನಾಯಿಯನ್ನು ನಂಬಿಕೊಂಡು ಮುದುಕಿಯ ಮೇಲೆ ಮನೆ ಬಿಟ್ಟು ಹೋಗುವುದಾ? ಅಮ್ಮನ ಪೆದ್ದುತನಕ್ಕೆ ಅವರಿಗೆ ವಾಚಾಮಗೋಚರವಾಗಿ ಬೈದು ಭಂಗಿಸಬೇಕೆಂದು ಅನಿಸುತ್ತಿದ್ದರೂ ವೆಂಕಟೇಶನಿಗೆ ಏನೋ ಗಂಟಲಲ್ಲಿ ಅಡ್ಡ ಸಿಕ್ಕಿಕೊಂಡಂತಾಗುತ್ತಿತ್ತು. ದುರ್ದೈವ ಎಷ್ಟಿತ್ತು ಅಂದರೆ ಸಾವಿನಮನೆಗೆ ಹೋದ ಪಾರಿಜಾತ ದಿನಬಳಕೆಯ ಒಡವೆಗಳನ್ನು ಬಿಟ್ಟರೆ ಹೆಚ್ಚಿನದನ್ನು ಧರಿಸಿಕೊಂಡು ಹೋಗಿರಲಿಲ್ಲ. ಖದೀಮರು ಯಾವಾಗಿನಿಂದಲೋ ಕಣ್ಣಿಟ್ಟಿರಬೇಕು. ಈ ಮನೆಯ ಸುದ್ದಿ ಒಟ್ಟು ಮಾಡಿಕೊಂಡಿರಬೇಕು. ಹೊಂಚು ಹಾಕುತ್ತಿದ್ದಿರಬೇಕು. ಅವೆಲ್ಲಾ ಯಕ್ಷಪ್ರಶ್ನೆಯೇನಲ್ಲ. ಅಷ್ಟು ಬುದ್ಧಿವಂತಿಕೆ ಅಂಥವರಿಗೆ ಇದ್ದೇ ಇರುತ್ತದೆ. ಕಲ್ಪನೆಗೆ ಹತ್ತಾರು ರೆಕ್ಕೆಗಳು.

★★★

ಓಡೋಡಿ ತೌರಿಗೆ ಬಂದಳು ಮನೆಮಗಳು. ಅಮ್ಮ, ಮಗಳು ಸೇರಿಕೊಂಡು ಮತ್ತೊಂದು ಒಬ್ಬೆ ಅತ್ತು ಸಮಾಧಾನ ಮಾಡಿಕೊಂಡರು. ಮನೆಯವರಿಗೆ, ಪೊಲೀಸಿನವರಿಗೆ, ಪೇಪರಿನವರಿಗೆ, ಟೀವಿ ಚಾನಲ್ಲಿನವರಿಗೆ, ಹೇಳಿ ಹೇಳಿ ಕಂಠಸ್ಥವಾಗಿದ್ದ ಅವೇ ಮಾತುಗಳನ್ನು ಮಗಳೆದುರು ಪುನರುಚ್ಚರಿಸಿದರು ಯಶೋದಮ್ಮ. ಉಂಡು ಕೈ ತೊಳೆದುಕೊಂಡು ಬರುವಾಗ ಇಬ್ಬರು ತಿರುಕರು ಉಣುಗೋಲಿನ ಹೊರಗೆ ಬಂದು ನಿಂತಿದ್ದರು. ಒಂದು ಗಂಡಸು, ಒಂದು ಹೆಂಗಸು. ಮೊರದಲ್ಲಿ ಅಕ್ಕಿ ತೆಗೆದುಕೊಂಡು ಹೋಗಿ ಅವರಿಗೆ ಉಣುಗೋಲಿನ ಈಚೆ ಬದಿಯಿಂದಲೇ ಕೊಟ್ಟಿದ್ದೊಂದು ಗೊತ್ತು. ಮುಖಕ್ಕೆ ಎಂತದೋ ಬೂದಿ ಉರುಬಿದಂತಾಯ್ತಪ್ಪಾ. ಮೈಮೇಲಿನ ಧ್ಯಾಸ ಇತ್ತು ಅಂತಲ್ಲ, ಇಲ್ಲ